ಪ್ರಮಾಣ ವಚನ ಬೋಧಿಸಿದ ದಿನಾಂಕಃ **25.06.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ವೈ.ಎಸ್.ಆರ್ ವಕೀಲರಿಂದ**

ನಾನು ಹುಟ್ಟಿದಾಗಿನಿಂದ ಗಂಟಿಗನಹಳ್ಳಿಯಲ್ಲಿ ವಾಸಮಾಡುತ್ತಿದ್ದೇನೆ. ನನಗೆ ಕನ್ನಡ ಚೆನ್ನಾಗಿ ಓದಲು ಬರೆಯಲು ಬರುತ್ತದೆ ಹಾಗೂ ಇಂಗ್ಲೀಷ್ ಸ್ವಲ್ಪ ಬರುತ್ತದೆ. ನಾನು ಸಹಿಯನ್ನು ಇಂಗ್ಲೀಷ್ ನಲ್ಲಿ ಮಾಡುತ್ತೇನೆ. ವಾದಿಯು ಸಾಲ ವಾಪಸ್ಸು ಕೊಡಬೇಕೆಂದು ಈ ದಾವೆಯನ್ನು ಹಾಕಿದ್ದಾರೆ. ಪ್ರತಿವಾದ ಪತ್ರವನ್ನು ಬರೆಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. **2** ನೇ ಪ್ರತಿವಾದಿ ನನ್ನ ಹೆಂಡತಿ, **3** ಮತ್ತು **4** ನೇ ಪ್ರತಿವಾದಿಗಳು ನನ್ನ ಮಕ್ಕಳು. ಸಾಕ್ಷಿಯು ಪ್ರತಿವಾದ ಪತ್ರ ಮತ್ತು ತಿದ್ದುಪಡಿ ಪತ್ರದಲ್ಲಿರುವ ಅವರ ಹಾಗೂ **2** ರಿಂದ **4** ನೇ ಪ್ರತಿವಾದಿಯ ಸಹಿಗಳನ್ನು ನೋಡಿ ಒಪ್ಪಿಕೊಂಡಿರುತ್ತಾರೆ.

ವಾದಿ ಮತ್ತು ಅವರ ಗಂಡನಾದ ಲೋಕೇಶ್ ನನಗೆ ಪರಿಚಯವಿದ್ದಾರೆ. ಲೋಕೇಶ್ ಅವರ ತಂದೆಯ ಹೆಸರು ಮುನಿಶಾಮಪ್ಪ ಎಂದರೆ ಸರಿ. ಮುನಿಶಾಮಪ್ಪನ ಕುಟುಂಬದವರಿಗೆ ಸಾಕಷ್ಟು ಜಮೀನು ಇದೆ ಹಾಗೂ ಆರ್ಥಿಕವಾಗಿ ಸದೃಡರಾಗಿದ್ದಾರೆ ಎಂದರೆ ಸರಿ. ನನಗೆ ವಾದಿಯ ಪರಿಚಯವಿದೆ. ವಾದಿಯು ಈ ದಾವೆಯನ್ನು ಹಳೆ ಸರ್ವೆ ನಂ.**107/2** ಹಾಗೂ ಹೊಸ ಸರ್ವೆ ನಂ.**107/21** ರಲ್ಲಿ **0.4. 3/4** ಗುಂಟೆಗೆ ಸಲ್ಲಿಸಿದ್ದಾರೆಂದರೆ ಸರಿ. ನಾನು ಸದರಿ ಆಸ್ತಿಯ ಮಾಲಿಕ ಎಂದರೆ ಸರಿ. ದಾವಾ ಆಸ್ತಿಯ ಖಾತೆಯು ಈಗಲೂ ಸಹ ನನ್ನ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ಸದರಿ ಆಸ್ತಿಯು ನನ್ನ ತಂದೆಯಿಂದ ನನಗೆ ಬಂದಿದೆ ಹಾಗೂ ನನ್ನ ಸ್ವಾಧೀನ ಅನುಭವದಲ್ಲಿ ಇದೆ ಎಂದರ ಸರಿ.

ನನ್ನ ತಿದ್ದುಪಡಿ ಪ್ರತಿವಾದ ಪತ್ರದ ಖಂಡಿಕೆ **15**(ಎ)ರಲ್ಲಿ ದಿನಾಂಕ:**04.04.2018** ರಂದು ಎಲ್ಲಾ ಪ್ರತಿವಾದಿಗಳು ವಾದಿಗೆ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿದ್ದೇವೆಂದು ಬರೆಸಿದ್ದೇವೆಂದರೆ ಸರಿ. ನಿ.ಪಿ.**1** ರಲ್ಲಿರುವ ಸಾಕ್ಷಿಯ ಸಹಿ ಹಾಗೂ **2** ರಿಂದ **4** ನೇ ಪ್ರತಿವಾದಿಗಳ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.**1**(ಎ) ಯಿಂದ (ಡಿ) ಎಂದು ಗುರುತಿಸಲಾಯಿತು. ನಿ.ಪಿ.**1** ರಲ್ಲಿ ಹಣದ ಭದ್ರತೆಗಾಗಿ ಸದರಿ ಪತ್ರವನ್ನು ಬರೆದುಕೊಟ್ಟಿದ್ದೇವೆಂದು ಬರೆಸಿದ್ದೀರಾ? ಎಂದರೆ ಇಲ್ಲ. ದಾವಾ ಆಸ್ತಿಗೆ **6** ಲಕ್ಷ ನಿಗದಿಪಡಿಸಿ ಅದರ ಪೈಕಿ ರೂ.**3,20,000/-**ನಗದು ಹಾಗು **2** ಲಕ್ಷ ಹಣವನ್ನು ಎರಡು ಚೆಕ್ ಮೂಲಕ ಒಟ್ಟು ರೂ.**5,20,000/-** ವಾದಿಯಿಂದ ಪಡೆದಿರುತ್ತೆವೆಂದರೆ ಸಾಕ್ಷಿಯು ವಾದಿಯಿಂದ ಕೇವಲ ರೂ.**4,80,000/-** ಪಡೆದಿರುತ್ತೇವೆ ಹಾಗೂ ಯಾವುದೇ ಚೆಕ್ಕುಗಳನ್ನು ಪಡೆದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿ.ಪಿ.**1** ರಲ್ಲಿ ಉಳಿಕೆ **80** ಸಾವಿರ ಹಣವನ್ನು ಕ್ರಯಪತ್ರ ನೋಂದಣಿ ಸಮಯದಲ್ಲಿ ಪಡೆದು ಕ್ರಯಪತ್ರವನ್ನು ಬರೆದುಕೊಡುತ್ತೇವೆಂದು ನಮೂದಾಗಿದೆ ಎಂದರೆ ಸಾಕ್ಷಿಯು ವಾದಿಯು ಬರೆದುಕೊಂಡಿರಬಹುದು ಆದರೆ ನಾವು ಆ ರೀತಿ ಹೇಳಿಲ್ಲ ಎಂದು ಉತ್ತರಿಸುತ್ತಾರೆ.

ವಾದಿಯ ದಿನಾಂಕ:**16.09.2019** ರಂದು ನಮಗೆ ಉಳಿಕೆ ಹಣ ತೆಗೆದುಕೊಂಡು ಕ್ರಯಪತ್ರ ಬರೆದುಕೊಡುವಂತೆ ನೋಟೀಸ್ ಕೊಟ್ಟಿದ್ದರು ಎಂದರೆ ಸರಿ. ಸದರಿ ನೋಟಿಸನ್ನು ನಾವು ಪಡೆದುಕೊಂಡಿದ್ದೆವು ಎಂದರೆ ಸರಿ. ಸದರಿ ನೋಟೀಸಿಗೆ ಪ್ರತ್ಯುತ್ತರ ಕೊಟ್ಟಿದ್ದೀರಾ? ಎಂದರೆ ಇಲ್ಲ. ಮೊದಲು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ನಿಮ್ಮ ಮಗಳ ಮದುವೆ ನಿಶ್ಚಯವಾಗಿದ್ದು ಅದಕ್ಕಾಗಿ ವಾದಿಯಿಂದ ಕೈಸಾಲ ಪಡೆದಿದ್ದೇನೆಂದು ಬರೆಸಿದ್ದೀರಾ? ಎಂದರೆ ಹೌದು. ಸದರಿ ಮೊದಲು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ಕೇವಲ ಕೈಸಾಲ ಪಡೆದಿದ್ದೇನೆಂದು ಬರೆಸಿರುವುದನ್ನು ಬಿಟ್ಟರೆ ಬೇರೆ ಯಾರ ಹೆಸರನ್ನು ಕೂಡ ಬರೆಸಿಲ್ಲ ಎಂದರೆ ಸರಿ. ನಾನು ವ್ಯವಸಾಯ ಮಾಡುತ್ತಿದ್ದೆನು. ಈಗ

6 ವರ್ಷದಿಂದ ಕೂಲಿ ಕೆಲಸ ಮಾಡುತ್ತಿದ್ದೇನೆ. ನಿಮಗೆ ಅಲ್ಪಸ್ವಲ್ಪ ವ್ಯವಹಾರದ ಜ್ಞಾನ ಇದೆಯಾ? ಎಂದರೆ ಹೌದು.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನಾರಾಯಣಸ್ವಾಮಿ ಅವರ ಕಡೆಯಿಂದ ರೂ.3,20,000/- ಹಣವನ್ನು ಸಾಲವಾಗಿ ಪಡೆದಿದ್ದೇನೆಂದು ಬರೆಸಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನರಸಿಂಹಸ್ವಾಮಿಯಿಂದ ಸಾಲ ಪಡೆದಿದ್ದೇನೆಂದು ಬರೆಸಿದ್ದೇನೆಂದು ಹೇಳುತ್ತಾರೆ. ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಯಾವ ದಿನಾಂಕದಂದು ಹಾಗೂ ಯಾವ ದಾಖಲೆಯ ಅನುಸಾರವಾಗಿ ಸದರಿ ಹಣವನ್ನು ಪಡೆದಿದ್ದೇನೆಂದು ಹೇಳಿ ಬರೆಸಿದ್ದೀರಾ? ಎಂದರೆ ಇಲ್ಲ. ಸದರಿ ಹಣ ಪಡೆಯುವಾಗ ಅವರಿಗೆ ಏನಾದರು ಪತ್ರ ಬರೆದುಕೊಟ್ಟಿದ್ದೀರಾ? ಎಂದರೆ ಇಲ್ಲ. ನಿ.ಪಿ.1 ರ 2 ನೇ ಪುಟದಲ್ಲಿ "ಈ ದಿನ ನಮ್ಮ ಕುಟುಂಬದ ದರದು ನಿಮಿತ್ಯವಾಗಿಯೂ ಮತ್ತು ಇತರೆ ವ್ಯವಹಾರಗಳಿಗೂ ಹಾಗೂ ಕೈಸಾಲಗಳನ್ನು ತೀರಿಸುವ ಸಲುವಾಗಿಯೂ ಅತೀ ಜರೂರಾಗಿ ಹಣ ಬೇಕಾಗಿರುವುದರಿಂದ" ಎಂದು ಬರೆಯಲಾಗಿದೆ ಎಂದರೆ ಸರಿ. ಪ್ರಮಾಣಪತ್ರದ ಮೂರನೇ ಖಂಡಿಕೆಯಲ್ಲಿ ನಮೂದಾಗಿರುವ ಮಗಳ ಮದುವೆಯ ವಿಚಾರವಾಗಿ ನಿ.ಪಿ.1 ರಲ್ಲಿ ಬರೆಸಿದ್ದೀರಾ? ಎಂದರೆ ಇಲ್ಲ. ನಾರಾಯಣಸ್ವಾಮಿ ಅವರಿಂದ ಸಾಲ ಪಡೆದುಕೊಂಡಿದ್ದೇನೆಂದು ಮುಖ್ಯವಿಚಾರಣೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಏನಾದರು ದಾಖಲೆ ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ನಾನು ಹೇಳಿದಂತ ಸದರಿ ನಾರಾಯಣಸ್ವಾಮಿಯು ನಿ.ಪಿ.1 ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದಾರಾ? ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಅವರು ನರಸಿಂಹಸ್ವಾಮಿ ಹಾಗೂ ನಾರಾಯಣಸ್ವಾಮಿ ಅಲ್ಲ ಎಂದು ಹೇಳುತ್ತಾರೆ. ನಾವು ದಾವಾ ಆಸ್ತಿಯನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ಅವರಿಂದ ರೂ.5,20,000/- ಮುಂಗಡ ಹಣವನ್ನು ಪಡೆದು, ಕ್ರಯಪತ್ರವನ್ನು ಬರೆದುಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ದಾವಾ ಆಸ್ತಿಯ ಮೌಲ್ಯವು ಒಂದು ಗುಂಟೆಗೆ 10 ಲಕ್ಷ ಬೆಲೆ ಇದೆ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ರೀತಿ ಮಾರುಕಟ್ಟೆ ಬೆಲೆ ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ವಾದಿಯು ನೋಟೀಸನ್ನು ಕೊಟ್ಟಾಗ ಈ ರೀತಿ ನಾನು ಕೇವಲ ಕೈಸಾಲ ಪಡೆದುಕೊಂಡಿದ್ದೇವೆ ಹಾಗೂ ಭದ್ರತೆಗಾಗಿ ಪತ್ರ ಬರೆದುಕೊಟ್ಟಿದೇವೆಂದು ಪ್ರತ್ಯುತ್ತರ ಕೊಡಲು ಏನಾದರು ತೊಂದರೆ ಇತ್ತಾ ಎಂದರೆ ಹೌದು. ನಾವು ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ವಾದಿಗೆ ಕ್ರಯದ ಕರಾರುಪತ್ರ ಬರೆದುಕೊಟ್ಟಿದ್ದರು ಕೂಡ ಕ್ರಯಪತ್ರ ಬರೆದುಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ವಿಷಯಗಳನ್ನು ಹೇಳಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಬೇರೆಯವರ ಕಡೆಯಿಂದ ಕೈಸಾಲ ಪಡೆದು ಭದ್ರತೆಗಾಗಿ ಆಸ್ತಿಯನ್ನು ಅಡಮಾನ ಮಾಡಿದ್ದೀರಾ? ಎಂದರೆ ಇಲ್ಲ. ನಾರಾಯಣಸ್ವಾಮಿಯಿಂದ ಕೈಸಾಲ ಪಡೆದಿದ್ದೇನೆಂದು ಹೇಳಿದ್ದು, ಆ ಸಮಯದಲ್ಲಿ ಏನಾದರು ಚೆಕ್ಕಿನ ವ್ಯವಹಾರ ಮಾಡಿದ್ದೀರಾ? ಎಂದರೆ ಇಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.